1ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ಮಳವಳ್ಳಿ

ಸಿಸಿ ನಂಃ 1110/2023 cw1 pw1

ಸಾಕ್ಷಿದಾರರ ಹೆಸರು ಃ ರಾಮ ಕೆ
ತಂದೆಯ ಹೆಸರು ಃ ಲೇಟ್ ಕರಿಗೌಡ
ವಯಸ್ಸು ಃ 59 ವರ್ಷಗಳು
ಉದ್ಯೋಗ ಃ ಆರಕ್ಷಕ ಉಪ ನಿರೀಕ್ಷಕರು,
ವಾಸ ಃ ಮಳವಳ್ಳಿ

ಸಾಕ್ಷಿಯನ್ನು ದಿನಾಂಕಃ-07.11.2025 ರಂದು ಪ್ರಮಾಣ ಮಾಡಿಸಲಾಯಿತು
ಮುಖ್ಯ ವಿಚಾರಣೆಃ- ಶ್ರೀ ಸ.ಸ.ಅ. ರವರಿಂದ.

ನಾನು ದಿಃ 27.1.2022 ರಿಂದ ಇಲ್ಲಿಯವರೆಗೆ ಮಳವಳ್ಳಿ ವಲಯ ಅಬಕಾರಿ ಕಛೇರಿಲ್ಲಿ ಅಬಕಾರಿ ಉಪನಿರೀಕ್ಷಕರಾಗಿ ಆಗಿ ಕರ್ತವ್ಯ ನಿರ್ವಹಿಸಿದ್ದೆನು.

1. ದಿಃ 14.09.2022 ರಂದು ಸರ್ಕಾರಿ ವಾಹನ ಸಂ.ಕೆಎ 11 ಜಿ 704 ಮಹೇಂದ್ರ ಬುಲೆರೊ ದಲ್ಲಿ ಸಿಬ್ಬಂದಿಯೊಂದಿಗೆ ಮಳವಳ್ಳಿ ಹಿಟ್ಟನಳ್ಳಿ ಕೊಪ್ಪಲು ರಸ್ತೆಯ ಆಲದ ಗೇಟು ಬಳಿ ಮದ್ಯಾಹ್ನ 3 ಗಂಟೆಗೆ ಗಸ್ತು ನಡೆಸುತ್ತಿರುವಾಗ ಮಳವಳ್ಳಿ ಕಡೆಯಿಂದ ಒಬ್ಬ ದ್ವಿಚಕ್ರ ಸವಾರನು ಪೆಟೊರಲ್ ಟ್ಯಾಂಕು ಮೇಲೆ ಒಂದು ಬಿಳಿ ಪ್ಲಾಸ್ಟಿಕ್ ಚೀಲ ಇಟ್ಟುಕೊಂಡು ಬರುತ್ತಿದ್ದು ಆತ ಮಂಡ್ಯ ರಸ್ತೆಯ ತಿರುವಿನಲ್ಲಿ ನಿಲ್ಲಿಸಿರುತ್ತಾನೆ. ಏನನ್ನು ಸಾಗಣೆ ಮಾಡುತ್ತಿದ್ದಿಯ ಕೇಳಲಾಗಿ ಸಮಂಜಸ ಉತ್ತರ ನೀಡಲಿಲ್ಲ. ಅದೇ ರಸ್ತೆಯಲ್ಲಿ ಹೋಗುತ್ತಿದ್ದ ಸಾರ್ವಜನಿಕರನ್ನು ಬರಮಾಡಿಕೊಂಡು ಪಂಚರಾಗುವಂತೆ ಕೇಳಿಕೊಂಡು ಅವರು ಸಹಕಾರ ನೀಡಲಿಲ್ಲ. ಇಲಾಖ ಸಿಬ್ಬಂದಿಗಳನ್ನು ಪಂಚಾಯಿತಿದಾರರಾಗಿ ನೇಮಿಸಿಕೊಂಡು ಶೋಧನ ವಾರಂಟು ಘನ ನ್ಯಾಯಲಯಕ್ಕೆ ಸಮಯಾವಕಾಶ ಇಲ್ಲದ ಕಾರಣ 1965 ರ ಕಲಂ 54 ರಡಿಯಲ್ಲಿ ಸ್ಥಳದಲ್ಲಿ ಶೋಧನ ಸಮುಚಿತ ತಯಾರಿಸಿಕೊಂಡು ಅಂಗಶೋಧ ಮಾಡಿಕೊಂಡು ದ್ವಿಚಕ್ರ ವಾಹನ ಪರಿಶೀಲಿಸಲಾಗಿ ನೀಲಿ , ಕಪ್ಪುಬಣ್ಣದ ಬಜಾಜು ಡಿಸ್ಕವರಿ ವಾಹನ ಆಗಿದ್ದು ನೊಂದಣಿ ಕೆಎ 03

ಹೆಚಿ 4824 ಆಗಿರುತ್ತದೆ. ಚೀಲದ ಗಂಟು ತೆರೆದು ನೋಡಲಾಗಿ ಮದ್ಯದ ಟೆಟ್ರಾ ಪ್ಯಾಕುಗಳು ಕಂಡುಬಂದವು ಪ್ಲಾಸ್ಟಿಕ್ ಚೀಲವನ್ನು ಪರಿಶೀಲಿಸಲಾಗಿ 90 ಮಿಲಿಯ 20 ಸಿಲ್ವರ್ ಕಪ್ ಸ್ಯಾಚೆಗಳು , 180 ಮಿಲಿ ಬ್ಯಾಗ್ ಪೈಪರ್ 10 , ಓಲ್ಡ್ ಅಡ್ಮಿರಲ್ 180 ಮಿಲ್ 15 , ಓಲ್ಡ್ ಟವರಿನ್ 180 ಮಿಲಿ 10 ಪ್ಯಾಕುಗಳು , ಹೈವರ್ಡ್ಸ್ ವಿಸ್ಕಿಯ 90 ಮಿಲಿ 96 ಪ್ಯಾಕೆಟುಗಳು ಮ್ಯಾಕ್ ಡೊವೆಲ್ 90 ಮಿಲಿ 10, ಪವರ ಕೂಲ್ 650 ಮಿಲಿ 12 ಬಿಯರ್ ಬಾಟಲುಗಳು ಕಂಡುಬಂದವು. ಹಾಗೂ ಸದರಿ ಆಸಾಮಿ ಯಾವುದೆ ಪರವಾನಗಿ ಇಲ್ಲದೆ ಅಕ್ರಮವಾಗಿ ಮದ್ಯದ ಟೆಟ್ರಾಪ್ಯಾಕು ಇಟ್ಟುಕೊಂಡು ಹಣ ಸಂಪಾದನೆ ಮಾಡುತ್ತಿಆತನ ಹೆಸರು ವಿಳಾಸ ಕೇಳಲಾಗಿ ಮಹೇಶ ಬಿನ್ ನಾಗರಾಜು ಎಂದು ತಿಳಿಸಿರುತ್ತಾನೆ. ದೊರೆತ ಮದ್ಯದಲ್ಲಿ ಸಿಲ್ವರ್ ಕಪ್ 2 , ಬ್ಯಾಗ್ ಪೈಪರ್ 2 , ಒಲ್ಡ ಅಡ್ಮಿರಲ್ 2 ಹೈವರ್ಡ್ಸ್ ವಿಸ್ಕಿಯ 2, ಮ್ಯಾಕ್ ಡೊವಲೆ 2 , ಪವರ್ ಕೂಲ್ 2 ಇವುಗಳನ್ನು ರಾಸಾಯನಿಕ ತಜ್ಞರ ಪರೀಕ್ಷೆಗೆ ಕಳಿಸಿ ವರದಿ ಪಡೆಯುವ ಸಲುವಾಗಿ ಪ್ರತ್ಯೇಕವಾಗಿ ಒಂದು ಬಿಳಿಯ ಚೀಲ ಹಾಕಿ ಬಾಯಿಯನ್ನು ದಾರದಿಂದ ಕಟ್ಟಿ ಅರಗನ್ನು ಹಚ್ಚಿ 306 ಅಕ್ಷರದಿಂದ ಸೀಲು ಮಾಡಲಾಯಿತು. ಆತನನ್ನು ಮದ್ಯವನ್ನು ಹೊಂದಿ ಸಾಗಾಣಿಕೆ ಮಾಡುವುದು ಶಿಕ್ಷಾರ್ಹ ಅಪರಾಧ ಎಂದು ತಿಳಿಸಿ ದಸ್ತಗಿರಿ ಮಾಡಲಾಯಿತು. ದೊರೆತ ದ್ವಿಚಕ್ರ ವಾಹನ , ಮುದ್ದೆ ಮಾಲು ಇಲಾಖ ವಶಕ್ಕೆ ವಶಪಡಿಸಿಕೊಳ್ಳಲಾಯಿತು. ಮಹಜರನ್ನು 3 ರಿಂದ 4.15 ಗಂಟೆವೆರೆಗೆ ಮಹಜರು ಕ್ರಮ ಜರುಗಿಸಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದ ಆಸಾಮಿಯನ್ನು ಮತ್ತು ಮದ್ಯದ ಪ್ಯಾಕೆಟುಗಳನ್ನು ವಶಕ್ಕೆ ಪಡೆದು ಠಾಣೆಗೆ ಬಂದು ಪ್ರ.ವ.ವ ತಯಾರಿಸಿ ವೈದ್ಯಾಧಿಕಾರಿಗಳಿಗೆ ಪತ್ರವನ್ನು ಬರೆದು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ಘನ ನ್ಯಾಯಲಯಕ್ಕೆ ಪ್ರ.ವ.ವ , ಶೋಧನ ಸಮುಚಿತ ಆಧಾರ , ಸ್ವಪಿರ್ಯಾದು , ನಮೂನೆ 7 , ರಿಮಾಡ್ ಅರ್ಜಿ ಮಾದರಿ ಸೀಲು ನಕಲು ಆರೋಪಿಯನ್ನು ನ್ಯಾಯಲಯಕ್ಕೆ ಹಾಜರುಪಡಿಸಲಾಯಿತು. ನ್ಯಾಯಲಯದ ವಾರಂಟನ್ನು ಪಡೆದು ಮಂಡ್ಯ ಕಾರಾಗೃಹಕ್ಕೆ ಕಳಿಸಿ ಸ್ವೀಕೃತಿಯನ್ನು ಪಡೆಯಲಾಯಿತು. ದಿಃ 3.10.2022 ರಂದು ದೊರೆತ ಮುದ್ದೆಮಾಲು , ದ್ವಿಚಕ್ರ ವಾಹನವನ್ನು ಮುಂದಿನ ತನಿಖೆಗಾಗಿ ಅಬಕಾರಿ ನಿರೀಕ್ಷಕರಿಗೆ ಹಸ್ತಾಂತರಿಸಲಾಯಿತು.

**2.** ಸ್ವಪಿರ್ಯಾದು ಸಾಕ್ಷಿ ನೋಡಿಗುರುತಿಸಿದ್ದು ಅದು ನಿಪಿ 1 ಆಗಿದ್ದು ಸಾಕ್ಷಿಯ ಸಹಿಯನ್ನು ನಿಪಿ 1ಎ ಎಂದು ಗುರುತಿಸಲಾಯಿತು. ಸದರಿ ಮಹಜರನ್ನು ಸಾಕ್ಷಿ ನೋಡಿಗುರುತಿಸಿದ್ದು ಅದು ನಿಪಿ 2 ಆಗಿದ್ದು ಸಾಕ್ಷಿಯ ಸಹಿಯನ್ನು ನಿಪಿ 2ಎ ಎಂದು ಗುರುತಿಸಲಾಯಿತು. ಪ್ರ.ವ.ವ ಸಾಕ್ಷಿ ನೋಡಿಗುರುತಿಸಿದ್ದು ಅದು ನಿಪಿ3 ಆಗಿದ್ದು ಸಾಕ್ಷಿಯ ಸಹಿಯನ್ನು ನಿಪಿ 3ಎ ಎಂದು ಗುರುತಿಸಲಾಯಿತು. ಶೋಧನ ಸಮುಚಿತ ಸಾಕ್ಷಿ ನೋಡಿಗುರುತಿಸಿದ್ದು ಅದು ನಿಪಿ 4 ಆಗಿದ್ದು ಸಾಕ್ಷಿಯ ಸಹಿಯನ್ನು ನಿಪಿ 4ಎ ಎಂದು ಗುರುತಿಸಲಾಯಿತು. ಪಿ ಎಫ್ ಸಾಕ್ಷಿ ನೋಡಿಗುರುತಿಸಿದ್ದು ಅದು ನಿಪಿ 5 ಆಗಿದ್ದು ಸಾಕ್ಷಿಯ ಸಹಿಯನ್ನು ನಿಪಿ 5ಎ ಎಂದು ಗುರುತಿಸಲಾಯಿತು. ನನ್ನ ಮೇಲಧಿಕಾರಿಗಳಿಗೆ ಕಳಿಸಿದ ವಶಪಡಿಸಿಕೊಂಡ ವಸ್ತುಗಳ ಪಟ್ಟಿ ನಿಪಿ 6 ಎಂದು ಸಾಕ್ಷಿಯ ಸಹಿಯನ್ನು ನಿಪಿ 6ಎ ಎಂದು ಗುರುತಿಸಲಾಯಿತು. ಮುಮ 1 ರಿಂದ 9 ಅಮಾನತುಪಡಿಸಿಕೊಂಡ ಮದ್ಯದ ಪೌಚುಗಳನ್ನು ಈಗ ನೋಡಿ ಗುರುತಿಸಿರುತ್ತಾರೆ.

**ಪಾಟೀಸವಾಲುಃ-** ಆರೋಪಿ ಪರ ಶ್ರೀ ಡಿ ಎಂ ಎಸ್ ವಕೀಲರಿಂದಃ

**3.** ಮೇಲಧಿಕಾರಿಗಳು ನನಗೆ ಯಾವುದೇ ನಿರ್ದೇಶನ ನೀಡಿಲ್ಲ. ಸದರಿ ವಿಷಯವನ್ನು ಸ್ವಪಿರ್ಯಾದಿಯಲ್ಲಿ ಹೇಳಿಲ್ಲ. ಗಸ್ತಿಗೆ ಮಳವಳ್ಳಿಯಿಂದ 2.45ಗೆ ಸುಲ್ತಾನ್ ರಸ್ತೆ ಮಾರ್ಗವಾಗಿ ಹೊರಟಿರುತ್ತೇನೆ. ರಸ್ತೆಯಿಂದ ನೇರವಾಗಿ ಘಟನ ಸ್ಥಳಕ್ಕೆ ಹೋಗಿರುತ್ತೇನೆ. ಘಟನ ಸ್ಥಳ ಠಾಣೆಯಿಂದ 8-10 ಕಿ.ಮೀ ಇರುತ್ತದೆ. ದೂರಿನಲ್ಲಿ ಜೀಪನ್ನು ರಸ್ತೆ ಬಳಿ ನಿಲ್ಲಿಸಿರುತ್ತೇನೆ ಎಂದು ಹೇಳಿರುತ್ತೇನೆ. ದೂರಿನಲ್ಲಿ ಹಾಗೂ ಮಹಜರನಲ್ಲಿ ಜೀಪು ಯಾವ ಸ್ಥಳದಲ್ಲಿ ನಿಲ್ಲಿಸಿ ಗಸ್ತು ಮಾಡಿರುತ್ತೇನೆ ಎಂದು ಬರೆದಿರುವುದಿಲ್ಲ. ಆರೋಪಿ ಯಾವ ದಿಕ್ಕಿನಿಂದ ಬರುತ್ತಿದ್ದ ಹೇಳಿರುವುದಿಲ್ಲ. ಸದರಿ ವಿಷಯ ಹೇಳಲು ತೊಂದರ ಇರಲಿಲ್ಲ. ಆರೋಪಿ ಮದ್ಯದ ಪೌಚುಗಳನ್ನು ಪೆಟ್ರೊಲ್ ಟ್ಯಾಂಕ ಮೇಲೆ ತರುತ್ತಿದ್ದರು. ನಾವು ಮಹಜರು ಮತ್ತು ಪಿರ್ಯಾದಿನಲ್ಲಿ ತಿಳಿಸಿರುವ 17640 ಲೀ. ಮತ್ತು 7.800 ಲೀ ಬಿಯರ್ ಅದನ್ನು ಕೆ

ಜಿ ಯಲ್ಲಿ **30-50** ಕೆ ಜಿ ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ. ವಸ್ತುಗಳು ಅತಿಯಾಗಿ ತೂಕ ಇರುವ ಕಾರಣ ಪಟ್ರೊಲ್ ಟ್ಯಾಂಕು ಮೇಲೆ ತಗೊಂಡು ಹೋಗಲು ಸಾಧ್ಯವಿಲ್ಲ. ಒಂದು ವೇಳೆ ಸದರಿ ವಸ್ತುಗಳನ್ನು ತಗೊಂಡು ಹೋಗುತ್ತಿದ್ದರೆ ಭಾರ ಇರುವ ಕಾರಣ ವಾಹನ ನಿಲ್ಲತ್ತೆ ಮದ್ಯದ ವಸ್ತುಗಳು ಬಿದ್ದು ಹೊಡೆದು ಹೋಗುತ್ತಿದ್ದವು ಎಂದರೆ ಸರಿಯಲ್ಲ. ಇಲಾಖ ವಾಹನದಲ್ಲಿ ಬೇಕಾಗಿರುವ ದಾಖಲಾತಿಗಳನ್ನು ಹೊರತುಪಡಿಸಿ ಬೇರೆ ಯಾವುದೆ ವಸ್ತುಗಳು ಇರಲಿಲ್ಲ. ಗಸ್ತು ಮಾಡುವ ಸಂದರ್ಭದಲ್ಲಿ ಸಾರ್ವಜನಿಕರು ಸಹಕಾರ ನೀಡಲಿಲ್ಲ. ಸದರಿ ವಿಷಯವನ್ನು ಮಹಜರು, ದೂರಿನಲ್ಲಿ ಬರೆದಿರುವುದಿಲ್ಲ.

**4.** ಆಲದಹಳ್ಳಿ ಸರ್ಕಲ್ ಸಾರ್ವಜನಿಕ ರಸ್ತೆ ಎಂದರೆ ಸರಿ. ನಾನು ಘಟನ ಸ್ಥಳಕ್ಕೆ ಹೋಗಿರುವುದಿಲ್ಲ , ಆರೋಪಿಯನ್ನು ಬಂಧಿಸಿರುವುದಿಲ್ಲ ಎಂದರೆ ಸರಿಯಲ್ಲ. ಮಹಜರನ್ನು ಘಟನ ಸ್ಥಳದಲ್ಲಿ ಬರೆದಿರುತ್ತೇನೆ. ಮಹಜರಿಗೆ ಸಾರ್ವಜನಿಕರ ಸಹಿ ಪಡೆದುಕೊಂಡಿರುವುದಿಲ್ಲ. ಮಹಜರಿನಲ್ಲಿ ಇಲಾಖ ಸಿಬ್ಬಂದಿ ಹೊರತುಪಡಿಸಿ ಇನ್ನಿತರ ಸಹಿ ಇರುವುದಿಲ್ಲ. ವಾಹನದ ಮಾಲೀಕರು ಯಾರೆಂದು ಆ ದಿನ ಗೊತ್ತಾಗಿರುವುದಿಲ್ಲ ನಂತರ ಗೊತ್ತಾಗಿರುತ್ತದೆ. ಇದರಂತೆ ಆರೋಪಿಗೆ ವಾಹನದ ಮಾಲೀಕ ಎಂದು ತಿಳಿದು ಸುಳ್ಳು ದೂರು ಸಲ್ಲಿಸಿರುತ್ತೀರ ಎಂದರೆ ಸರಿಯಲ್ಲ. ಆರೋಪಿ ಹೆಸರಲ್ಲಿ ಯಾವುದೆ ವಾಹನ ಇರುವುದಿಲ್ಲ ಎಂದರೆ ಸರಿಯಲ್ಲ. ಈ ವಿಷಯವು ನನಗೆ ತನಿಖ ಕಾಲದಲ್ಲಿ ಗೊತ್ತಾಗಿರುತ್ತದೆ ಹಾಗೂ ವಾಹನದ ಮಾಲೀಕರ ಹೆಸರು ನನಗೆ ಗೊತ್ತಿರುವುದಿಲ್ಲ. ವಶಪಡಿಸಿಕೊಂಡ ವಸ್ತುವನ್ನು ನಿಖರವಾಗಿ ಬರೆಯುವುದು ನಿಯಮ ಎಂದರೆ ಸರಿ. ಪ್ಲಾಸ್ಟಿಕ್ ಚೀಲವನ್ನು ಮಾಲುಪಟ್ಟಿಯಲ್ಲಿ ನಮೂದು ಮಾಡಿಲ್ಲ. ಚೀಲ ಯಾವ ಕಂಪನಿಯದ್ದು ಬರೆದಿರುವುದಿಲ್ಲ. ವಶಪಡಿಸಿಕೊಂಡ ಬ್ಯಾಚು ನಂ. ಸಿರಿಯಲ್ ನಂ. ದೂರಿನಲ್ಲಿ ಹೇಳಿರುವುದಿಲ್ಲ. ಪ್ರತ್ಯೇಕವಾಗಿ ವಶಪಡಿಸಿಕೊಂಡ ಮುದ್ದೆಮಾಲುಗಳ ಮದ್ಯದ ಪೌಚು ಹಾಗೂ ಬಾಟಲು ಮೇಲೆ ಮಹಜರು ಸಹಿ , ಸಿಬ್ಬಂದಿ ಸಹಿ ಇರುವುದಿಲ್ಲ. ಮತ್ತು ದಿನಾಂಕ ನಮೂದಾಗಿರುವುದಿಲ್ಲ. ಚೀಲವನ್ನು ಸೃಷ್ಟಿಸಿರುತೇನೆ ಎಂದರೆ ಸರಿಯಲ್ಲ. ವಶಪಡಿಸಿಕೊಂಡ ಚೀಲದ ಮೇಲೆ ಆರೋಪಿ

ಸಹಿ ಪಡೆದುಕೊಂಡಿಲ್ಲ. ಠಾಣೆಯಲ್ಲಿ ಕುಳಿತು ಮಹಜರು ಜರುಗಿಸಿರುತ್ತೇನೆ ಎಂದರೆ ಸರಿಯಲ್ಲ. ಮಹಜರನ್ನು 3-4.15 ವರೆಗೆ ಬರೆದಿರುತ್ತೇನೆ. ಆರೋಪಿಯನ್ನು 3 ಗಂಟೆಗೆ ದಸ್ತಗಿರಿ ಮಾಡಿರುತ್ತೇನೆ. ನಾನು ದಸ್ತಗಿರಿ ಮಾಡಿದ ಮೇಲೆ ಮಹಜರು ಮಾಡಿರುತ್ತೇನೆ. ನಾನು ಎಷ್ಟು ಗಂಟೆಯಿಂದ ದಸ್ತಗಿರಿ ಮಾಡಿ ಮಹಜರುಮಾಡಿರುತ್ತೇನೆ ಎಂದು ಪ್ರತ್ಯೇಕವಾಗಿ ಹೇಳಲಾಗುವುದಿಲ್ಲ. ಠಾಣಾ ಅಧಿಕಾರಿಗಳ ಹೇಳಿಕೆಗೆ ಪೂರಕವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಠಾಣೆಯಲ್ಲಿ ಇರುವ ವಾರಸುದಾರರಿಲ್ಲದ ಮಾಲುಗಳನ್ನು ಈ ಪ್ರಕರಣಕ್ಕೆ ಸೃಷ್ಟಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೆ ತನಿಖಾ ವಸ್ತುಗಳನ್ನು ತೆಗೆದುಕೊಂಡು ಹೋಗಿರುವುದಿಲ್ಲ. ತನಿಖೆ ಮಾಡದೆ ಮಹಜರನ್ನು ಸೃಷ್ಟಿಸಿರುತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಿಂದ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ

1ನೇ ಅಪರ ಸಿ.ಜೆ. ಮತ್ತು ಜೆಎಂಎಫ್‌ಸಿ,
ಮಳವಳ್ಳಿ.